# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-436/2014/ಡಿಆರ್ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 4/5/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

**ವಿಷಯ:** ಶ್ರೀ.ಓ.ಪಿ.ಸತೀಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕೂದುವಳ್ಳಿ ಗ್ರಾಮಪಂಚಾಯಿತಿ, (ಹಾಲಿ ನಿವೃತ್ತ), (2) ಶ್ರೀ.ಎನ್.ಟಿ.ಜಯಪ್ರಕಾಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಿಕ್ಕಮಗಳೂರು, (3) ಶ್ರೀಮತಿ.ವಸಂತಕುಮಾರಿ, ಅಧ್ಯಕ್ಷರು, ಕೂದುವಳ್ಳಿ ಗ್ರಾಮಪಂಚಾಯಿತಿ, ಮತ್ತು (4) ಶ್ರೀ.ಹೆಚ್.ನಾಗರಾಜನಾಯಕ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಿಕ್ಕಮಗಳೂರು ಜಿಲ್ಲೆ, – ಇವರ ವಿರುದ್ಧದ ನಡವಳಿ ಕುರಿತು.

******

1. ಶ್ರೀ.ಸುಂದರೇಶ್ ಎನ್.ಆರ್, ಬಿನ್ ರಂಗೇಗೌಡ, ತೋರಣಮಾವು ಗ್ರಾಮ, ವಸ್ತಾರೆ ಹೋಬಳಿ, ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ.ಓ.ಪಿ.ಸತೀಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕೂದುವಳ್ಳಿ ಗ್ರಾಮಪಂಚಾಯಿತಿ, (ಹಾಲಿ ನಿವೃತ್ತ), ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ, (ಇನ್ನು ಮುಂದ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಶ್ರೀ.ಚಂದ್ರಶೇಖರ್ ಇವರ ಜಮೀನಿನ ಪಕ್ಕದಿಂದ ಶ್ರೀ.ಶಂಕರೇಗೌಡ ಇವರ ಜಮೀನಿನ ತನಕ ಹೋಗುವ ನೀರುಗಾಲುವೆ ರಿಪೇರಿಯಲ್ಲಿ ಕಳಪೆ ಕಾಮಗಾರಿ ಮತ್ತು ಸ್ವಲ್ಪ ಕೆಲಸ ಮಾಡಿಸಿ ಅಧಿಕ ಮೊತ್ತದ ಬಿಲ್ಲನ್ನು ಮಾಡಿರುತ್ತಾರೆ ಮತ್ತು ಏರಿ ಪಕ್ಕದಲ್ಲಿ ಕಾಮಗಾರಿ ಮಾಡಲು ಒತ್ತಿದ್ದು, ಏರಿಯ ಮೇಲಿಂದ ಜಮೀನುಗಳಿಗೆ ಹೋಗಲು ಮತ್ತು ದನಕರುಗಳನ್ನು ಹೊಡೆದುಕೊಂಡು ಹೋಗಲು ತೊಂದರೆಯಾಗಿರುತ್ತದೆಯೆಂದು ಆಪಾದನೆ ಮಾಡಿ ದೂರು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ತಮ್ಮ ಆಕ್ಷೇಪಣೆಯಲ್ಲಿ ಶ್ರೀ.ಚಂದ್ರಶೇಖರ್ ರವರ ಜಮೀನಿನಿಂದ ಶ್ರೀ.ಶಂಕರೇಗೌಡ ರವರ ಜಮೀನಿನ ತನಕ ನೀರು ಗಾಲುವೆ ನಿರ್ಮಾಣ ಕಾಮಗಾರಿ ಮಂಜೂರಾಗಿದ್ದು, ಮಂಜೂರಾತಿ ಪತ್ರ ದೊರೆತಿದ್ದು, ಕಾಮಗಾರಿ ಕೆಲಸ ನಡೆಯುತ್ತಲಿದೆ. ಸದರಿ ಕಾಮಗಾರಿಗೆ ಇದುವರೆಗೂ ಬಿಲ್ಲನ್ನು ಪಾವತಿಸಿರುವುದಿಲ್ಲವೆಂದು ಹೇಳಿರುತ್ತಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಸದರಿ ಪ್ರತ್ಯುತ್ತರದಲ್ಲಿ ಶ್ರೀ.ಚಂದ್ರಶೇಖರ್ ಜಮೀನಿನಿಂದ ಶ್ರೀ.ಶಂಕರೇಗೌಡರವರ ಜಮೀನಿನ ತನಕ ನೀರುಗಾಲುವೆ ನಿರ್ಮಾಣ ಕಾಮಗಾರಿ ಮಂಜೂರಾಗಿ ನಿರ್ಮಾಣಗೊಂಡಿರುತ್ತದೆ. ಶ್ರೀ.ಪ್ರವೀಣ್ ರವರು ಗುತ್ತಿಗೆದಾರರಾಗಿದ್ದು, ಶಾಂತಮ್ಮ ಕೋಂ ಸೋಮಶೇಖರ್ ಕುದುವಳ್ಳಿ ಗ್ರಾಮ ಪಂಚಾಯತಿ ಸದಸ್ಯ ಎದುರುದಾರರಿಗೆ ಸುಳ್ಳು ಮಾಹಿತಿ ನೀಡಿ ಫೋರ್ಜರಿ ಸಹಿ ಮಾಡಿ ಕಡತಕ್ಕೆ ರವಾನಿಸಿರುತ್ತಾರೆಂದು ಹೇಳಿರುತ್ತಾರೆ.

5. ನಂತರದಲ್ಲಿ ಸದರಿ ದೂರಿನ ಬಗ್ಗೆ ತನಿಖೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸ್ ಅಧೀಕ್ಷಕರಿಗೆ ಆದೇಶಿಸಿರುವುದಾಗಿದೆ. ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ತಮ್ಮ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಕೂದುವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತೋರಣಮಾವು ಗ್ರಾಮದ ಶ್ರೀ.ಚಂದ್ರಶೇಖರ್‌ರವರ ಜಮೀನಿನಿಂದ ಶ್ರೀ.ಶಂಕರೇಗೌಡ ರವರ ಜಮೀನಿನವರೆಗೆ ನೀರು ಕಾಲುವೆ ನಿರ್ಮಾಣದ ಕಾಮಗಾರಿಯು ನಿಯಮಾನುಸಾರ ಪೂರ್ಣವಾಗಿ ನಡೆದಿದ್ದು, ಕಾಮಗಾರಿಯ ಮೊತ್ತ ರೂ.2,29,845/- ಗಳ ಪೈಕಿ ರೂ.72,384/- ಗಳ ಕೂಲಿ ಬಾಬ್ತು ಮಾತ್ರ ಪಾವತಿಸಿದ್ದು, ಉಳಿದ ಕೂಲಿ ಹಣವನ್ನು ಪಾವತಿಸಬೇಕಾಗಿರುವುದು ದಾಖಲೆಗಳಿಂದ ಮತ್ತು ಸ್ಥಳ ಭೇಟಿಯಿಂದ ತಿಳಿದುಬಂದಿರುತ್ತದೆ. ನೀರು ಕಾಲುವೆಯ ಅಕ್ಕಪಕ್ಕದಲ್ಲಿ ಜಮೀನುಗಳಿದ್ದು, ಜಮೀನುಗಳ ಬದುಗಳ ಮೇಲೆ ಸಂಬಂಧಪಟ್ಟ ಜಮೀನಿನವರು ತಿರುಗಾಡುತ್ತಿದ್ದು, ಜಮೀನಿಗೆ ತಿರುಗಾಡಲು ತೊಂದರೆಯಾಗಿರುವ ಬಗ್ಗೆ ವಿಚಾರಣೆ ಕಾಲದಲ್ಲಿ ತಿಳಿದುಬಂದಿರುವುದಿಲ್ಲ. ಕಾಮಗಾರಿ ವೇಳೆ ಏರಿಯನ್ನು ಒತ್ತುವರಿ ಮಾಡಿದ್ದಾರೆಂಬ ಆಪಾದನೆಯು ದಾಖಲೆಗಳಿಂದ ಮತ್ತು ಸ್ಥಳ ಭೇಟಿ ಕಾಲದಲ್ಲಿ ಕಂಡುಬಂದಿರುವುದಿಲ್ಲವೆಂದು ಹೇಳಿರುತ್ತಾರೆ.

6. ಕಡತದಲ್ಲಿರುವ ದಾಖಲಾತಿಗಳನ್ನು ಹಾಗೂ ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ನೀರು ಕಾಲುವೆ ಕಾಮಗಾರಿ ನಡೆದಿರುವ ಬಗ್ಗೆ ಹಾಗೂ ಸದರಿ ಕಾಮಗಾರಿಯ ಬಗ್ಗೆ ದಾಖಲೆಗಳನ್ನು ನಿರ್ವಹಿಸಿರುವ ಬಗ್ಗೆ ವರದಿ ನೀಡಿರುವುದು ಕಂಡುಬರುತ್ತದೆ. ಅಲ್ಲದೆ, ಸದರಿ ಕಾಮಗಾರಿ ಪೂರ್ಣಗೊಂಡರೂ ಆ ಬಗ್ಗೆ ಸಂಪೂರ್ಣ ವೆಚ್ಚದ ಬಿಲ್ ಪಾವತಿಯಾಗಿರುವುದಿಲ್ಲವೆಂದು ಹೇಳಿರುವುದು ಕಂಡುಬರುತ್ತದೆ. ಮತ್ತು ಕೂಲಿ ಹಣವನ್ನು ಕಾರ್ಮಿಕರಿಗೆ ನೀಡದೇ ಇರುವುದು ಮತ್ತು ಈ ಪ್ರಕರಣ ದಾಖಲಾಗಿರುವ ಕಾರಣ ನೀಡಬೇಕಾದ ಕೂಲಿ ಹಣವನ್ನು ಕಾರ್ಮಿಕರಿಗೆ ನೀಡದೇ ಇರುವುದು ಗ್ರಾಮಸ್ಥರ ಮನವಿಯನ್ನು ಪರಿಶೀಲಿಸಿದಾಗ ಕಂಡುಬರುತ್ತದೆ. ಆದ್ದರಿಂದ, ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸಿದ ಎಲ್ಲಾ ಗ್ರಾಮಸ್ಥರಿಗೂ ಸಲ್ಲಬೇಕಾದ ಕೂಲಿ ಹಣವನ್ನು ಶೀಘ್ರವಾಗಿ ಪಾವತಿ ಮಾಡುವಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕೂದುವಳ್ಳಿ ಗ್ರಾಮಪಂಚಾಯತ್ ಇವರಿಗೆ ಆದೇಶಿಸಲಾಗಿತ್ತು.

7. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕೂದುವಳ್ಳಿ ಗ್ರಾಮಪಂಚಾಯಿತಿ, ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಜಾಬ್ ಕಾರ್ಡ್‌ದಾರರಿಗೆ ಅವರ ಬ್ಯಾಂಕ್ ಖಾತೆಗೆ ಹಣ ಜಮಾವಣೆಯಾಗಿರುತ್ತದೆಯೆಂದು ತಿಳಿಸಿರುತ್ತಾರೆ. ತನ್ನ ವರದಿಯ ಜೊತೆ ಕಾಮಗಾರಿ ಪ್ರಾರಂಭ ಪತ್ರದ ಪ್ರತಿಯನ್ನು ಹಾಜರು ಪಡಿಸಿದ್ದು, ಅದರಲ್ಲಿ ಅಂದಾಜು ಮೊತ್ತ ರೂ.2,38,000/-

ಅದರಲ್ಲಿ ಕೂಲಿ ಮೊತ್ತ ರೂ.1,42,800/–ಮತ್ತು ಸಾಮಗ್ರಿ ಮೊತ್ತ ರೂ.90,300/– ಎಂದು ನಮೂದು ಇರುವುದು ಕಂಡುಬರುತ್ತದೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಹಾಜರು ಪಡಿಸಿರುವ ಮೆಜರ್‌ಮೆಂಟ್ ಬುಕ್ ವಿವರಗಳನ್ನು ಪರಿಶೀಲಿಸಿದಾಗ ದಿ.24/12/14 ರಂದು ಒಟ್ಟು ರೂ.64,940/– ಮತ್ತು ದಿ.15/4/2014 ರಂದು ಒಟ್ಟು ರೂ.42,384/– ನ್ನು ಜಮಾ ಮಾಡಿರುವ ಬಗ್ಗೆ ನಮೂದು ಕಂಡುಬರುತ್ತದೆ. ಅದನ್ನು ಪರಿಶೀಲಿಸಿದಾಗ ಒಟ್ಟು ರೂ.1,37,324/–ಗಳನ್ನು ಖಾತೆಗೆ ಜಮಾ ಮಾಡಿರುವ ನಮೂರು ಇರುತ್ತದೆ. ಆದರೆ, ಕಾಮಗಾರಿ ಪ್ರಾರಂಭ ಪತ್ರದ ಪ್ರಕಾರ ಕೂಲಿ ಮೊತ್ತ ರೂ.1,42,800/– ಆಗಿದ್ದು, ಉಳಿದ ಮೊತ್ತ ಏನಾಗಿರುತ್ತದೆಯೆನ್ನುವ ಬಗ್ಗೆ ಯಾವುದೇ ನಮೂದು ಕಂಡುಬಂದಿರುವುದಿಲ್ಲ. ಆದ್ದರಿಂದ, ಆ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿಕ್ಕಮಗಳೂರು ಇವರಿಗೆ ಆದೇಶಿಸಲಾಗಿತ್ತು.

8. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿಕ್ಕಮಗಳೂರು ಇವರು ನೀರುಗಾಲುವೆ ದುರಸ್ತಿ ಬಗ್ಗೆ ಕಾರ್ಮಿಕರಿಗೆ ಸಲ್ಲಬೇಕಾದ ಕೂಲಿ ಹಣದ ಬಗ್ಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಿಂದ ವರದಿಯನ್ನು ಪಡೆದು ಹಾಜರು ಪಡಿಸಿರುತ್ತಾರೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕೂದುವಳ್ಳಿ ಗ್ರಾಮಪಂಚಾಯಿತಿ ಇವರ ವರದಿಯನ್ನು ಪರಿಶೀಲಿಸಿದಾಗ, ನೀರುಗಾಲುವೆ ದುರಸ್ತಿ ಬಗ್ಗೆ ಜಾಬ್‌ಕಾರ್ಡ್‌ದಾರರಿಗೆ ಅವರ ಬ್ಯಾಂಕ್ ಖಾತೆಗೆ ಹಣ ಜಮಾವಣೆಯಾಗಿರುತ್ತದೆ ಎಂದು ಹೇಳಿರುತ್ತಾರೆ.

9. ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಕಾಮಗಾರಿಯ ಅಂದಾಜು ಮೊತ್ತ ರೂ.2,38,000/– ಮಂಜೂರಾಗಿರುವುದು ಕಂಡುಬರುತ್ತದೆ. ಅಳತೆ ಪುಸ್ತಕದಂತೆ ಒಟ್ಟು ರೂ.2,00,011/– ಕ್ಕೆ ಅಳತೆ ಪುಸ್ತಕದಲ್ಲಿ ನಮೂದು ಇರುವುದು ಕಂಡುಬಂದಿದ್ದು, ಮಸ್ಟರ್ ರೋಲನ್ನು ಪರಿಶೀಲಿಸಿದಾಗ, ಒಟ್ಟು ರೂ.1,99,972/– ಕೂಲಿಕಾರರಿಗೆ ಪಾವತಿಯಾಗಿರುವುದು ಕಂಡುಬರುತ್ತದೆ. ಸದರಿ ಕಾಮಗಾರಿಗೆ ಮಂಜೂರಾದ ಉಳಿದ ಮೊತ್ತ ಏನಾಗಿದೆ ಎನ್ನುವ ಬಗ್ಗೆ ಯಾವುದೇ ವರದಿಯನ್ನು ನೀಡಿರುವುದಿಲ್ಲ. ಆದ್ದರಿಂದ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಲ್ಲಾ ಮೂಲ ದಾಖಲಾತಿಗಳ ಜೊತೆ ಗೌರವಾನ್ವಿತರ ಮುಂದೆ ಹಾಜರಾಗುವಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕೂದುವಳ್ಳಿ ಗ್ರಾಮಪಂಚಾಯತ್ ಇವರಿಗೆ ಆದೇಶಿಸಲಾಗಿತ್ತು.

10. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕೂದುವಳ್ಳಿ ಗ್ರಾಮಪಂಚಾಯತ್ ಇವರು ಹಾಜರಾಗಿ, ತನ್ನ ಹೇಳಿಕೆಯಲ್ಲಿ ಉಳಿಕೆ ಮೊತ್ತದಲ್ಲಿ ಮರಳು, ಸಿಮೆಂಟ್ ಮತ್ತು ಜಲ್ಲಿಯನ್ನು ಖರೀದಿ ಮಾಡಲಾಗಿರುತ್ತದೆಯೆಂದು ಹೇಳಿರುತ್ತಾರೆ. ಆ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸಿದಾಗ, ಕಾಮಗಾರಿ ದಿ.18/2/14 ರಂದು ಪ್ರಾರಂಭವಾಗಿ ದಿ.24/3/2015 ರಂದು ಪೂರ್ಣಗೊಂಡಿರುವುದು ಕಂಡುಬರುತ್ತದೆ. ಆದರೆ, ಮರಳು, ಸಿಮೆಂಟ್ ಮತ್ತು ಜಲ್ಲಿ ಖರೀದಿಸಿರುತ್ತಾರೆನ್ನುವ ಖರೀದಿ ಬಿಲ್ಲನ್ನು ಪರಿಶೀಲಿಸಿದಾಗ, ದಿ.16/2/14 ರಂದು ಖರೀದಿಸಿರುವುದು ಕಂಡುಬರುತ್ತದೆ. ಅಂದರೆ ಕಾಮಗಾರಿ ಪ್ರಾರಂಭಿಸುವ ಮೊದಲೇ ಅದನ್ನು ಖರೀದಿಸಿರುವುದು ಕಂಡುಬಂದಿದ್ದು, ಆದರೆ ಅಳತೆ ಪುಸ್ತಕದಲ್ಲಿ ಅದನ್ನು ದಿ.14/3/14 ರಂದು

ನಮೂದಿಸಿರುವುದು ಕಂಡುಬರುತ್ತದೆ ಮತ್ತು ಅಳತೆ ಪುಸ್ತಕದ ಕೊನೆಯ ಪುಟದಲ್ಲಿ ಅದನ್ನು ನಮೂದಿಸಿರುವುದು ಕಂಡುಬಂದಿದ್ದು ಅನುಮಾನಗಳಿಗೆ ಎಡೆಮಾಡಿಕೊಡುತ್ತದೆ. ಆದ್ದರಿಂದ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅಳತೆ ಪುಸ್ತಕದಲ್ಲಿ ಅಳತೆಯನ್ನು ನಮೂದಿಸಿರುವ ಸಹಾಯಕ ಅಭಿಯಂತರರು, ಕಾಮಗಾರಿಯ ಸಮಯದಲ್ಲಿ ಕರ್ತವ್ಯದಲ್ಲಿದ್ದ ಪಂಚಾಯತ್ ಅಧ್ಯಕ್ಷರು, ಬಿಲ್ ಪಾವತಿಸಲು ಕಾರಣಕರ್ತರಾದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಚಿಕ್ಕಮಗಳೂರು ಆಗಿ ಯಾರು ಕರ್ತವ್ಯದಲ್ಲಿದ್ದರು ಎನ್ನುವ ಬಗ್ಗೆ ವರದಿ ಸಲ್ಲಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿಕ್ಕಮಗಳೂರು ಇವರಿಗೆ ಆದೇಶಿಸಲಾಗಿತ್ತು.

11. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿಕ್ಕಮಗಳೂರು ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಶ್ರೀ.ಜಯಪ್ರಕಾಶ್ ಇವರು ಸಹಾಯಕ ಅಭಿಯಂತರರಾಗಿ, ಶ್ರೀ.ವಸಂತಕುಮಾರಿ ಇವರು ಗ್ರಾಮಪಂಚಾಯಿತಿ ಅಧ್ಯಕ್ಷರಾಗಿ ಮತ್ತು ಶ್ರೀ.ನಾಗರಾಜ ನಾಯಕ್ ಇವರು ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆಂದು ತಿಳಿಸಿದ್ದು, ಆದ್ದರಿಂದ ಸದರಿಯವರನ್ನು ಪಕ್ಷಗಾರರನ್ನಾಗಿ ಮಾಡಿ ಅವರಿಂದ ಆಕ್ಷೇಪಣೆಯನ್ನು ತರಿಸಲಾಗಿರುತ್ತದೆ.

12. 2ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಚಿಕ್ಕಮಗಳೂರು ತಾಲ್ಲೂಕು, ಕೂದುವಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ತೋರಣಮಾವು ಗ್ರಾಮದ ಟಿ.ಸಿ.ಚಂದ್ರಶೇಖರ್‌ರವರ ಜಮೀನಿನಿಂದ ಇ.ಆರ್.ಶಂಕರೇಗೌಡರ ಜಮೀನಿನವರೆಗೆ ನೀರು ಕಾಲುವೆ ನಿರ್ಮಾಣ ಕಾಮಗಾರಿಯು ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ರೂ.2.38 ಲಕ್ಷಗಳಿಗೆ ಅನುಮೋದನೆಗೊಂಡಿದ್ದು, ಎಸ್.ಡಿ.ಆರ್. ಸಂ.221/13-14 ರ ಪ್ರಕಾರ ತಾಂತ್ರಿಕವಾಗಿ ಮಂಜೂರಾಗಿರುತ್ತದೆ. ಸದರಿ ಕಾಮಗಾರಿಯನ್ನು ಗ್ರಾಮ ಪಂಚಾಯಿತಿಯಿಂದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮುಖಾಂತರ ನಿರ್ವಹಿಸಿದ್ದು, ಆ ಕಾಮಗಾರಿಯನ್ನು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ತಾಂತ್ರಿಕ ಸಹಾಯಕ ಇಂಜಿನಿಯರ್ ಆಗಿರುವ ಶ್ರೀಮತಿ.ಸೌಮ್ಯ ಸಿ.ಕೆ, ರವರು ಕಾಮಗಾರಿಯ ಮೇಲುಸ್ತುವಾರಿ ಮಾಡಿ ಅಳತೆ ಪುಸ್ತಕದಲ್ಲಿ ಅಳತೆಗಳನ್ನು ಸ್ವತಃ ದಾಖಲಿಸಿರುತ್ತಾರೆ. ಕಾಮಗಾರಿಯನ್ನು ಸಮರ್ಪಕವಾಗಿ ಕೆಲಸ ನಿರ್ವಹಿಸಿ ನಡೆದಿರುವಷ್ಟು ಕಾಮಗಾರಿಗೆ ಬಿಲ್‌ನ್ನು ಗ್ರಾಮಪಂಚಾಯಿತಿಯಿಂದ ಪಾವತಿಸಿರುತ್ತಾರೆ. ಸದರಿ ಕಾಮಗಾರಿಯನ್ನು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಮಾಡಲಾಗಿದ್ದು, ಕಾಮಗಾರಿಯ ಅಳತೆಗಳನ್ನು ಮಾತ್ರ ಸ್ಥಳ ಪರಿಶೀಲನೆ ಮಾಡಿ, ಅಳತೆ ಪುಸ್ತಕಕ್ಕೆ ಮೇಲು ಸಹಿ ಹಾಕಿರುತ್ತಾರೆಂದು ಹೇಳಿರುತ್ತಾರೆ.

13. 3ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಕೂದುವಳ್ಳಿ ಗ್ರಾಮಪಂಚಾಯಿತಿಯ ತೋರಣಮಾವು ಗ್ರಾಮದ ಟಿ.ಸಿ.ಚಂದ್ರಶೇಖರ್‌ರವರ ಜಮೀನಿನಿಂದ ಇ.ಆರ್.ಶಂಕರೇಗೌಡರವರ ಜಮೀನಿನವರೆಗೆ ನೀರು ಕಾಲುವೆ ನಿರ್ಮಾಣ ಕಾಮಗಾರಿಯು ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುತ್ತದೆ. ಸದರಿ ಕಾಮಗಾರಿಯನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ

ಖಾತ್ರಿ ಯೋಜನೆಯ ಇಂಜಿನಿಯರ್ ಆದ ಶ್ರೀಮತಿ.ಸೌಮ್ಯ ಸಿ.ಕೆ. ಇವರು ಕಾಮಗಾರಿಯನ್ನು ಸಮರ್ಪಕವಾಗಿ ಮಾಡಿಸಿರುತ್ತಾರೆ. ಅಧಿಕ ಮೊತ್ತದ ಹಣವನ್ನು ಪಾವತಿಸಿರುವುದಿಲ್ಲವೆಂದು ಹೇಳಿರುತ್ತಾರೆ.

14. 4ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಸಂಬಂಧಪಟ್ಟ ತಾಂತ್ರಿಕ ಸಹಾಯಕರ ಮೇಲುಸ್ತುವಾರಿಯಲ್ಲಿ ಜಾಬ್‌ಕಾರ್ಡ್ ಹೊಂದಿರುವ ಸ್ಥಳೀಯ ಕೂಲಿ ಕೆಲಸಗಾರರಿಂದ ಕಾಮಗಾರಿಯನ್ನು ನಿರ್ವಹಿಸುತ್ತಾರೆ. ಕಾಮಗಾರಿ ಮುಗಿದ ನಂತರ ಸದರಿ ಕಾಮಗಾರಿಯನ್ನು ಗ್ರಾಮಪಂಚಾಯಿತಿಯವರ ಕೋರಿಕೆಯ ಮೇರೆಗೆ ಮೇಲ್ನೋಟಕ್ಕೆ ತಾಂತ್ರಿಕವಾಗಿ ಪರಿಶೀಲಿಸಿ, ತೃಪ್ತಿಕರವಾಗಿದ್ದಲ್ಲಿ ತಾಂತ್ರಿಕ ಸಹಾಯಕರು ದಾಖಲಿಸಿರುವ ಕಾಮಗಾರಿ ಅಳತೆಯ ಅಳತೆ ಪುಸ್ತಕಕ್ಕೆ ಮೇಲು ಸಹಿ ಮಾಡುತ್ತಾರೆ. ಆದ್ದರಿಂದ, ಸದರಿ ಪ್ರಕರಣದಲ್ಲಿ ಅವರ ಅಧಿಕಾರ ವ್ಯಾಪ್ತಿ ಸೀಮಿತವಾಗಿದ್ದು, ಪ್ರಕರಣದ ಸಂಪೂರ್ಣ ಜವಾಬ್ದಾರನಾಗಿರುವುದಿಲ್ಲ. ಸದರಿ ಪ್ರಕರಣದಲ್ಲಿ ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಗೂ ತಾಂತ್ರಿಕ ಸಹಾಯಕ ಇಂಜಿನಿಯರ್‌ಗಳು ಅನುಷ್ಠಾನಾಧಿಕಾರಿಗಳಾಗಿದ್ದು, ಅವರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆಂದು ಹೇಳಿರುತ್ತಾರೆ.

15. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಮರಳು, ಸಿಮೆಂಟ್ ಮತ್ತು ಜಲ್ಲಿಗೆ ಸಂಬಂಧಪಟ್ಟಂತೆ ದಿ.16/2/2014 ರಂದು ಡಿ.ಆರ್.ದಿಲೀಪ್‌ಕುಮಾರ್ ರವರು ಸಾಮಾಗ್ರಿ ಖರೀದಿ ಬಗ್ಗೆ ರೂ.29,834/- ಗಳಿಗೆ ಬಿಲ್‌ನ್ನು ನೀಡಿರುವುದು ಕಂಡುಬರುತ್ತದೆ. ಕಾಮಗಾರಿಗೆ ಸಂಬಂಧಪಟ್ಟಂತೆ ಅಳತೆ ಪುಸ್ತಕದ ಪ್ರತಿಯನ್ನು ಪರಿಶೀಲಿಸಿದಾಗ, ಅಳತೆ ಪುಸ್ತಕದ ಪುಟ ಸಂ.30 ರಲ್ಲಿ ಸಾಮಾಗ್ರಿ ಸರಬರಾಜುದಾರರು ನೀಡಿರುವ ಬಿಲ್ಲಿನ ಬಗ್ಗೆ ಅಳತೆ ಪುಸ್ತಕದಲ್ಲಿ ದಿ.14/3/14 ರಂದು ನಮೂದಿಸಿರುವುದು ಕಂಡುಬರುತ್ತದೆ. ಸರಬರಾಜುದಾರರು ನೀಡಿರುವ ಬಿಲ್‌ನ ಪ್ರಕಾರ ದಿ.16/2/14 ರಂದು ಸಾಮಾಗ್ರಿಗಳನ್ನು ಖರೀದಿಸಲಾಗಿದ್ದು, ಆದರೆ ಸದರಿ ದಿನಾಂಕದಂದು ಆ ಬಗ್ಗೆ ಅಳತೆ ಪುಸ್ತಕದಲ್ಲಿ ನಮೂದು ಮಾಡಿರುವುದು ಕಂಡುಬರುತ್ತಿಲ್ಲ. ಆದರೆ, ಕಾಮಗಾರಿಗೆ ಸಂಬಂಧಪಟ್ಟಂತೆ ಅಳತೆ ಪುಸ್ತಕದ ಕೊನೆಯ ಪುಟದಲ್ಲಿ ಅದನ್ನು ನಮೂದಿಸಿರುವುದು ಕಂಡುಬರುತ್ತದೆ. ಅದನ್ನು ಗಮನಿಸಿದಾಗ ಮೊತ್ತವನ್ನು ಸರಿದೂಗಿಸಲು ಸದರಿ ಬಿಲ್‌ಗಳನ್ನು ಸೃಷ್ಟಿಸಿ ಅಳತೆ ಪುಸ್ತಕದ ಕೊನೆಯ ಪುಟದಲ್ಲಿ ನಮೂದಿಸಿರುವ ಅಂಶಗಳನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಅಲ್ಲದೆ ಅಳತೆ ಪುಸ್ತಕವನ್ನು ಪರಿಶೀಲಿಸಿದಾಗ, ಸದರಿ ಅಳತೆ ಪುಸ್ತಕದಲ್ಲಿ ಯಾವ ದಿನಾಂಕದಂದು ಎಷ್ಟು ಕಾಮಗಾರಿಯನ್ನು ಮಾಡಲಾಗಿದೆಯೆನ್ನುವ ಬಗ್ಗೆ ಸ್ಪಷ್ಟವಾಗಿ ನಮೂದು ಕಂಡುಬರುತ್ತಿಲ್ಲ. ಪ್ರತಿ ದಿನ ಪೂರ್ಣಗೊಂಡ ಕಾಮಗಾರಿಯ ಬಗ್ಗೆ ದಿನಾಂಕವನ್ನು ಅಳತೆ ಪುಸ್ತಕದಲ್ಲಿ ನಮೂದಿಸಿರುವುದು ಕಂಡುಬರುತ್ತಿಲ್ಲ. ಈ ಎಲ್ಲಾ ನ್ಯೂನತೆಗಳು ಇದ್ದರೂ ಸಹ ಬಿಲ್‌ನ್ನು ಪಾವತಿಸಿರುವುದು ಕಂಡುಬರುತ್ತದೆ. ಅಲ್ಲದೆ ಕೂಲಿಕಾರರಿಗೆ ಸೂಕ್ತ ಸಮಯದಲ್ಲಿ ಕೂಲಿ ಹಣವನ್ನು ಪಾವತಿಸದೆ ಬಾಕಿ ಇರಿಸಿಕೊಂಡು ಕರ್ತವ್ಯಲೋಪ ಎಸಗಿರುವುದು ವರದಿಯಲ್ಲಿ ಕಂಡುಬರುತ್ತದೆ. ಆದ್ದರಿಂದ, 1 ರಿಂದ 4ನೇ ಎದುರುದಾರರ ಶಿಸ್ತು ಕ್ರಮಕ್ಕೆ ಭಾದ್ಯಸ್ಥರಾಗಿರುತ್ತಾರೆ.

16. 1, 2 ಮತ್ತು 4ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ನಿಯಮಗಳನ್ನು ಉಲ್ಲಂಘಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ, 1, 2 ಮತ್ತು 4ನೇ ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಹಾಗೂ **1ನೇ ಎದುರುದಾರರಾದ ಶ್ರೀ.ಸತೀಶ್ ಇವರು ದಿ.30/6/2014 ರಂದು ನಿವೃತ್ತಿಯಾಗಿರುವುದರಿಂದ ಸದರಿಯವರ ವಿರುದ್ಧ ಕರ್ನಾಟಕ ಸೇವಾ ನಿಯಮಾವಳಿಗಳ ನಿಯಮ 214(2)(ಬಿ)(i) ರಂತೆ ಸರ್ಕಾರದ ಅನುಮತಿಯೊಂದಿಗೆ** ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

17. 3ನೇ ಎದುರುದಾರರಾದ ಶ್ರೀಮತಿ.ವಸಂತಕುಮಾರಿ ಇವರು ಜನಪ್ರತಿನಿಧಿಯಾಗಿದ್ದು, ಅವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 43ಎ ರನ್ವಯ ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಿದೆ.

18. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಎನ್.ಆನಂದ್) 4/5
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.